# ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್),


ಪ್ಲಾಟ್ ನಂ. 1 (ಎ ಮತ್ತು ಬಿ), ಬೇಲೂರು ಕೈಗಾರಿಕಾ ಪ್ರದೇಶ, ಬೆಳಗಾವಿ ರಸ್ತೆ,

ಧಾರವಾಡ – 580 011.

ದೂರವಾಣಿ ಸಂಖ್ಯೆ : (0836) 2486836 / 2486694


---

**ಸಂಖ್ಯೆ : ಸಿಡಾಕ್ : ಸಿ ಮತ್ತು ಆ : 371(ಜೆ) : 2019–20/2021–22 :** **ದಿನಾಂಕ : 17.12.2021**

## ಅಧಿಸೂಚನೆ

**ಹೈದ್ರಾಬಾದ್–ಕರ್ನಾಟಕ ವ್ಯಾಪ್ತಿಯ ಸ್ಥಳೀಯ ವೃಂದ ಶ್ರೇಣಿಯ ಹುದ್ದೆಗಳನ್ನು ಸಂವಿದಾನಿಕ 371(ಜೆ) ಅಡಿಯಲ್ಲಿ ನೇರ ನೇಮಕಾತಿಯಿಂದ ಭರ್ತಿ ಮಾಡುವುದು.**

ಹೈದ್ರಾಬಾದ್–ಕರ್ನಾಟಕ ಪ್ರದೇಶ ಅಭ್ಯರ್ಥಿಗಳಿಂದ ಈ ಹಿಂದೆ ಹೊರಡಿಸಿದ ಅಧಿಸೂಚನೆ ದಿನಾಂಕ : 09.03.2020 ರನ್ವಯ ಅರ್ಜಿಗಳನ್ನು ಅಹ್ವಾನಿಸಿ ದಿನಾಂಕ : 04.04.2020 ಸಂಜೆ 5:00 ಗಂಟೆಯೊಳಗಾಗಿ ಭರ್ತಿಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವೆಂದು ತಿಳಿಸಲಾಗಿತ್ತು. ಈ ಮಧ್ಯ ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ದೇಶಾದ್ಯಂತ ಲಾಕ್‌ಡೌನ್ ಆಗಿರುವುದರಿಂದ ದಿನಾಂಕ : 04.04.2020 ರ ವರೆಗೆ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದು ಹಾಗೂ ಲಾಕ್‌ಡೌನ್ ಮುಗಿದ ನಂತರ ಅರ್ಜಿ ಸ್ವೀಕರಿಸುವ ದಿನಾಂಕವನ್ನು ವಿಸ್ತರಿಸಲಾಗುವುದು ಎಂದು ಸಿಡಾಕ್ ಜಾಲತಾಣದಲ್ಲಿ ದಿನಾಂಕ : 01.04.2020 ರಂದು ಪ್ರಕಟಿಸಲಾಗಿತ್ತು. ತದನಂತರ, ಸರ್ಕಾರದ ಸೂಚನೆಗಳನ್ವಯ ಸದರಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿತ್ತು. ಪ್ರಸ್ತುತ ಸರ್ಕಾರದ ಆದೇಶದನ್ವಯ ಭರ್ತಿ ಪ್ರಕ್ರಿಯೆಯನ್ನು ಮುಂದುವರೆಸಬೇಕಾಗಿರುತ್ತದೆ. ಆ ಮುಂದುವರಿಕೆಯ ಭಾಗವಾಗಿ ಈ ಕೆಳಗಿನ ಹುದ್ದೆಗಳಿಗೆ ಅರ್ಜಿಗಳನ್ನು ಸ್ವೀಕರಿಸುವ ದಿನಾಂಕವನ್ನು 27.12.2021ರ ವರೆಗೆ ವಿಸ್ತರಿಸಲಾಗಿದೆ. ಈ ಹುದ್ದೆಗಳನ್ನು ಹೈದ್ರಾಬಾದ್–ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಸಿಡಾಕ್ ಸಂಸ್ಥೆಯ ಕಛೇರಿಗಳಿಗೆ ಭರ್ತಿ ಮಾಡಲಾಗುವುದು.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ವಿದ್ಯಾರ್ಹತೆ | ಹುದ್ದೆಗಳ ಸಂಖ್ಯೆ | ಮೀಸಲಾತಿ ಮತ್ತು ಹುದ್ದೆಗಳ ಸಂಖ್ಯೆ | ಸಂಬಳ ವೇತನ ಶ್ರೇಣಿ |
|---|---|---|---|---|---|
| 01. | ಸಹಾಯಕ ತರಬೇತಿ ಅಧಿಕಾರಿ | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಇ. / ಬಿ.ಟೆಕ್ ಪದವಿ ಹೊಂದಿರಬೇಕು ಹಾಗೂ ಕಂಪ್ಯೂಟರ್ ಜ್ಞಾನ ಅವಶ್ಯ. | 01 | ಸಾಮಾನ್ಯ ಅರ್ಹತೆ–1 | ರೂ. 40900–78200 |
| 02. | ಕಿರಿಯ ಕಾರ್ಯನಿರ್ವಾಹಕರು | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿಯನ್ನು ಹೊಂದಿರಬೇಕು ಹಾಗೂ ಕಂಪ್ಯೂಟರ್ ಜ್ಞಾನ ಅವಶ್ಯ. | 01 | 1) ಸಾಮಾನ್ಯ ಅರ್ಹತೆ–1 | ರೂ. 36000–67550 |
| 03. | ಸಹಾಯಕರು | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಹೊಂದಿರಬೇಕು ಹಾಗೂ ಕಂಪ್ಯೂಟರ್ ಜ್ಞಾನ ಅವಶ್ಯ. | 02 | 1) ಪರಿಶಿಷ್ಟ ಜಾತಿ–1<br>2) ಸಾಮಾನ್ಯ ಅರ್ಹತೆ–1 | ರೂ. 30350–58250 |

**ಸಂಕ್ಷಿಪ್ತ** : 1) ಜಿ.ಎಂ–ಜನರಲ್ ಮೆರಿಟ್ (ಸಾಮಾನ್ಯ ಅರ್ಹತೆ) (2) ಎಸ್.ಸಿ.–ಶೆಡುಲ್ ಕಾಸ್ಟ್ (ಪರಿಶಿಷ್ಟ ಜಾತಿ)

1. **ವಯೋಮಿತಿ (Age)** : ವಯೋಮಿತಿಯನ್ನು ಈ ಕೆಳಗಿನಂತೆ ನಿಗಧಿಪಡಿಸಲಾಗಿದೆ.

| | | |
|---|---|---|
| ಕನಿಷ್ಠ | : | 21 ವರ್ಷಗಳು |
| ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ | : | ಗರಿಷ್ಠ 35 ವರ್ಷಗಳು |
| ಪ.ಜಾ. ಅರ್ಹತೆಯ ಅಭ್ಯರ್ಥಿಗಳಿಗೆ | : | ಗರಿಷ್ಠ 40 ವರ್ಷಗಳು |
| ಅಂಗವಿಕಲ/ವಿಧವೆ ಅಭ್ಯರ್ಥಿಗಳಿಗೆ | : | 10 ವರ್ಷ ಸಡಿಲಿಕೆ |
| ಮಾಜಿ ಸೈನಿಕರಾಗಿದ್ದಲ್ಲಿ | : | ಸೇವೆ ಸಲ್ಲಿಸಿರುವಷ್ಟು ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು |

2. **ಲಗತ್ತಿಸಬೇಕಾದ ಪ್ರಮಾಣ ಪತ್ರಗಳು : ಅರ್ಜಿ ಸಲ್ಲಿಸುವ ಅರ್ಜಿದಾರರು ಅರ್ಜಿಯೊಂದಿಗೆ ಈ ಕೆಳಗಿನ ಲಗತ್ತುಗಳನ್ನು ಝುರಾಕ್ಸ್ ಪ್ರತಿಗಳೊಂದಿಗೆ ಅರ್ಜಿಸಲ್ಲಿಸಬೇಕು ಹಾಗೂ ಹುದ್ದೆಗೆ ಆಯ್ಕೆಗೊಂಡಲ್ಲಿ ಒಪ್ಪಿಸಬೇಕಾದ ಮೂಲ ದಾಖಲೆಗಳು :**

ಎ. ಜಾತಿ ಪ್ರಮಾಣ ಪತ್ರ

ಬಿ. ಈ ಹುದ್ದೆಗಳ ಆಯ್ಕೆಗೆ ಅರ್ಹರಾಗಲು ಅಭ್ಯರ್ಥಿಗಳು ಮಂಡಳಿಯಿಂದ ನಡೆಸಿದ್ದ ಎಸ್.ಎಸ್.ಎಲ್.ಸಿಯ ಕನ್ನಡ ಪ್ರಥಮ ಭಾಷೆಯಾಗಿ ತೇರ್ಗಡೆ ಹೊಂದಿರಬೇಕು. ಈ ಕನ್ನಡ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಸಿ. ಅನುಚ್ಛೇಧ 371(ಜೆ) ರಂತೆ ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಅನುಬಂಧ–ಎ ಯಲ್ಲಿರುವ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಆಯುಕ್ತರಿಂದ ಪಡೆದಿಟ್ಟುಕೊಳ್ಳತಕ್ಕದ್ದು. ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಸದರಿ ಮೀಸಲಾತಿಯಡಿ ಪರಿಗಣಿಸಲಾಗುವುದಿಲ್ಲ. ನಿಗದಿಪಡಿಸಿದ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತೀರಸ್ಕರಿಸಲಾಗುವುದು.

ಡಿ. ಸರ್ಕಾರಿ ಸೇವೆಯಲ್ಲಿರುವ ನೌಕರರು ದಿನಾಂಕ : 29.01.2014 ರಂದು ಹೊರಡಿಸಲಾದ ಅಧಿಸೂಚನೆ–1 ಸಂಖ್ಯೆ : ಡಿಪಿಎಆರ್ 43 ಹೆಚ್‌ಕೆಸಿ 2013 ರಲ್ಲಿನ ಅನುಬಂಧ–ಎ ನಲ್ಲಿ ಇರುವಂತೆ ತಮ್ಮ ಸೇವಾ ಪುಸ್ತಕದಲ್ಲಿ ದಿನಾಂಕ : 01.01.2013 ಕ್ಕಿಂತ ಮುಂಚಿನ ನಮೂದಿನಲ್ಲಿ ಅವರ ಸ್ವಂತ ಊರು ಅಥವಾ ಸ್ಥಳಕ್ಕೆ ಸಂಬಂಧಿಸಿದಂತೆ ಹೈದರಾಬಾದ್ – ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಬೀದರ, ಕಲಬುರಗಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಯಾದಗಿರಿ ಕಂದಾಯ ಜಿಲ್ಲೆಯ ಅಡಿಯಲ್ಲಿ ಬರುವಂತಹ ಪ್ರದೇಶದ ನಮೂದು ಇದ್ದ ಪಕ್ಷದಲ್ಲಿ, ಅಂತಹ ಅಭ್ಯರ್ಥಿಗಳು ಕಛೇರಿ ಮುಖ್ಯಸ್ಥರಿಂದ ದಿನಾಂಕ : 29.01.2014ರ ಅಧಿಸೂಚನೆ–1 ರಲ್ಲಿನ ನಿಯಮ 5(2) ರಲ್ಲಿ ನೀಡಲಾದ ಸ್ವಗ್ರಾಮ ಪ್ರಮಾಣ ಪತ್ರವನ್ನು ಆಧರಿಸಿ ಅಂತಹವರ ಅರ್ಜಿಯನ್ನು ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗೆದುರಾಗಿ ಪರಿಗಣಿಸಲಾಗುವುದು.

ಇ. ಶೈಕ್ಷಣಿಕ ಅರ್ಹತಾ ಪ್ರಮಾಣ ಪತ್ರಗಳು

ಎಫ್. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರ.

ಜಿ. ಪರಿಶಿಷ್ಟ ಜಾತಿ ಮೀಸಲಾತಿ ಕೋರಿದ್ದಲ್ಲಿ ಸಂಬಂಧಿತ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು.

ಎಚ್. ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ಗುಣ ಮತ್ತು ನಡತೆ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು.

ಐ. ಇತ್ತೀಚಿನ ಪಾಸ್‌ಪೋರ್ಟ್ ಫೋಟೋದೊಂದಿಗೆ ಅಂತರ್ ಜಾಲದಲ್ಲಿ ಲಭ್ಯವಿರುವ ಎ4 ಗಾತ್ರದ ಅರ್ಜಿ ನಮೂನೆ ಪ್ರಕಾರ ಅರ್ಜಿ ಸಲ್ಲಿಸಬೇಕು ಮತ್ತು ವಯಸ್ಸಿನ ಪ್ರೂಫ್, ಅರ್ಹತೆ ಮತ್ತು ಜಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳ ಎಲ್ಲ ಸಂಬಂಧಿಸಿದ ನಕಲುಗಳನ್ನು ಗೆಜೆಟೆಡ್ ಆಫೀಸರಿಂದ ಪ್ರಮಾಣೀಕರಿಸಿ ಲಗತ್ತಿಸಬೇಕು.

ಜೆ. ಅಭ್ಯರ್ಥಿಗಳು ಭರ್ತಿ ಮಾಡಿ ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ ರೂ. 250/– ಎಸ್.ಸಿ ಅಭ್ಯರ್ಥಿಗಳಿಗೆ ಮತ್ತು ರೂ. 500/– ಸಾಮಾನ್ಯ ಅಭ್ಯರ್ಥಿಗಳಿಗೆ ನಿಗದಿಪಡಿಸಿದ್ದು, ಸದರಿ ಮೊತ್ತವನ್ನು Director, CEDOK, Dharwad ಇವರ ಹೆಸರಿನಲ್ಲಿ ಡಿ.ಡಿ. ತೆಗೆದು ಅರ್ಜಿಯೊಂದಿಗೆ ಲಗತ್ತಿಸಬೇಕು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದಂರ್ಭದಲ್ಲಿ ಹಿಂತಿರುಗಿಸಲಾಗುವುದಿಲ್ಲ. ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

3. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಪೋಸ್ಟ್‌ಗೆ ಅರ್ಜಿ ಸಲ್ಲಿಸಲು ಬಯಸಿದರೆ ಪ್ರತಿ ಪೋಸ್ಟಗೆ ಅದರದೇ ಆದ ಡಿ.ಡಿ. ಜೊತೆಗೆ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಬೇಕು.

4. ಉದ್ಯೋಗಗಳ ಸಂಖ್ಯೆ ರೋಸ್ಟರ್ ಬಿಂದು ಅರ್ಜಿ ನಮೂನೆ ಮತ್ತು ಇತರೆ ವಿವರಗಳನ್ನು ಅಧಿಕೃತ ವೆಬ್‌ಸೈಟ್ cedokdwd.karnataka.gov.in ನಿಂದ ಡೌನ್‌ಲೋಡ್ ಮಾಡಬಹುದಾಗಿದೆ.

5. ಸಿಡಾಕ್, ಧಾರವಾಡದಲ್ಲಿ ಮತ್ತು ಸಿಡಾಕ್ ಅಧಿಕೃತ ಅಂತರ್ ಜಾಲದಲ್ಲಿ ಹಾಗೂ ನೋಟಿಸ್ ಬೋರ್ಡನಲ್ಲಿ ಆಯ್ಕೆಯಾದ ಪಟ್ಟಿಯನ್ನು ಸೂಚಿಸಲಾಗುವುದು.

6. ಆಯ್ಕೆ ಪಟ್ಟಿಯ ಅಧಿಸೂಚನೆ ದಿನಾಂಕ ಅಧಿಕೃತ ಅಂತರ್ ಜಾಲದಲ್ಲಿ ಘೋಷಿಸಲ್ಪಡುತ್ತದೆ.

7. ಆಸಕ್ತಿಯುಳ್ಳ ಅಭ್ಯರ್ಥಿಗಳು **ಡಿಸೆಂಬರ್ 28, 2021 ಕ್ಕಿಂತ** ಮೊದಲು ಅಥವಾ ಅಂದು ಕಛೇರಿ ಮುಚ್ಚುವ ಸಮಯದೊಳಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ವಿಳಾಸ : **ನಿರ್ದೇಶಕರು, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಪ್ಲಾಟ್** ನಂ. 1 **(ಎ ಮತ್ತು ಬಿ), ಬೇಲೂರು ಕೈಗಾರಿಕಾ ಪ್ರದೇಶ, ಬೆಳಗಾವಿ ರಸ್ತೆ, ಧಾರವಾಡ** – 580 011.

8. ಇಬ್ಬರು ಅಥವಾ ಹೆಚ್ಚಿಗೆ ಅಭ್ಯರ್ಥಿಗಳು ಒಂದೇ ಅಂಕ ಪಡೆದಿದ್ದಲ್ಲಿ ಮೊದಲು ಹುಟ್ಟಿದವರಿಗೆ ಆಯ್ಕೆಗಾಗಿ ಪರಿಗಣಿಸಲಾಗುವುದು.

9. ಅರ್ಜಿಯನ್ನೊಳಗೊಂಡ ಲಕೋಟೆಯ ಮೇಲೆ ***"ಸಹಾಯಕ ತರಬೇತಿ ಅಧಿಕಾರಿ / ಕಿರಿಯ ಕಾರ್ಯನಿರ್ವಾಹಕರು / ಸಹಾಯಕರು"*** ಎಂದು ಹಾಗೂ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮೀಸಲಾತಿಗೊಳಪಡುವ ಅಭ್ಯರ್ಥಿ ಎಂದು ದಪ್ಪ ಅಕ್ಷರಗಳಲ್ಲಿ ಬರೆಯತಕ್ಕದ್ದು. ಖುದ್ದಾಗಿ ಅರ್ಜಿಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಸ್ವೀಕೃತಿ ಪಡೆಯತಕ್ಕದ್ದು.

10. ಅಭ್ಯರ್ಥಿಯು ಸಂಬಂಧಪಟ್ಟ ಹುದ್ದೆಗೆ ಆಯ್ಕೆಯಾದಲ್ಲಿ ರಾಜ್ಯದ ಯಾವುದೇ ಸ್ಥಳದಲ್ಲಿ ಕೆಲಸ ಮಾಡಲು ಒಪ್ಪಿಗೆ ಇರಬೇಕು.

**ಸಹಿ/–**

**ನಿರ್ದೇಶಕರು, ಸಿಡಾಕ್, ಧಾರವಾಡ.**